ಸಾಕ್ಷಿಯನ್ನು ದಿನಾಂಕಃ 04-12 -2019 ರಂದು ಕರೆದು ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎ ಎ ಎಂ, ಪ್ರತಿವಾದಿ 20 ರಿಂದ 26 ಪರ ವಕೀಲರಿಂದ ಃ

ದಾವಾ ಆಸ್ತಿಗಳ ಮೂಲ ಮಾಲೀಕರು ಹಣಮಪ್ಪ, ಸೈದಪ್ಪ, ಮಣೆಗೆನ್ನಪ್ಪ, ಬಸಪ್ಪ ಆಗಿರುತ್ತಾರೆ. ಅವರಿಗೆ ಸರ್ಕಾರದಿಂದ 60 ವರ್ಷಗಳ ಹಿಂದೆ ಮಂಜೂರಾಗಿರುತ್ತದೆ. ದಾವಾ ಆಸ್ತಿಗಳಿಗೆ ಮೇಲ್ಕಂಡ ನಾಲ್ಕು ಜನಗಳನ್ನು ಬಿಟ್ಟು ಬೇರೆ ಯಾರೂ ಮಾಲೀಕರಾಗಿರಲಿಲ್ಲ. ಮೇಲ್ಕಂಡ ನಾಲ್ಕು ಜನ ಮಾಲೀಕರು ಈಗ 20 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ದಾವಾ ಜಮೀನಿನ ಉತಾರನಲ್ಲಿ ಪ್ರಸ್ತುತ ಮಾಯವ್ವ ಗಂಡ.ಬಸಪ್ಪ ಕುಂಚನೂರ, ಯಲ್ಲವ್ವ ಗಂಡ.ಪಾಂಡಪ್ಪ ಕುಂಚನೂರ, ರುಕ್ಮವ್ವ ಕುಂಚನೂರ ರವರ ಹೆಸರಗಳು ಇರುತ್ತವೆ. ಅವರು ನಮ್ಮ ದೊಡ್ಡಪ್ಪನ ಮಕ್ಕಳು ಆಗಿರುತ್ತಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ. 1975 ರಿಂದ ಸಿದ್ದಪ್ಪ ಕುಂಚನೂರ ರವರ ಹೆಸರಿನಲ್ಲಿ ದಾವಾ ಜಮೀನು ಇತ್ತು ಮತ್ತು ಅವರೇ ಸ್ವಾಧೀನದಲ್ಲಿದ್ದು, ಮಾಲೀಕರಾಗಿರುತ್ತಾರೆ. ಈಗ ಪ್ರತಿವಾದಿ 20 ರಿಂದ 26 ರ ಹೆಸರುಗಳು ದಾವಾ ಜಮೀನಿನ ಉತಾರನಲ್ಲಿ ನಮೂದ ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಖೊಟ್ಟಿಯಾಗಿ ಅವರುಗಳು ತಮ್ಮ ಹೆಸರುಗಳನ್ನು ದಾವಾ ಜಮೀನಿನ ಉತಾರೆಗಳಲ್ಲಿ ದಾಖಲಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಖೊಟ್ಟಿಯಾಗಿ ಉತಾರೆಗಳಲ್ಲಿ ದಾಖಲಿಸಿಕೊಂಡಿದ್ದನ್ನು ಪ್ರಶ್ನಿಸಿ, ತಹಶೀಲದಾರ ರವರ ಮುಂದಾಗಲೀ ಅಥವಾ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ತಕರಾರನ್ನು ಸಲ್ಲಿಸಿರುವುದಿಲ್ಲ. ದಾವಾ ಜಮೀನಿನ ಮೂಲ ಮಾಲೀಕರು ಸಿದ್ದಪ್ಪ ಕುಂಚನೂರ ಆಗಿದ್ದು, ತದನಂತರ ಅವರು ಮಕ್ಕಳುಗಳಾದ ಪ್ರತಿವಾದಿ 20 ರಿಂದ 26 ರವರು ದಾವಾ ಜಮೀನಿನ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. 20 ರಿಂದ 26 ನೇ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿ 3, 8, 9 ರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾ ದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ